ಸಾರಿಗೆ ಸಂಪರ್ಕ

2814 (3225), ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಂತಾಮಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸಂಪರ್ಕವಿಲ್ಲದೇ ವಿದ್ಯಾರ್ಥಿಗಳು, ರೈತರು ಹಾಗೂ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಎಷ್ಟು ಮಾರ್ಗಗಳಲ್ಲಿ ನಿಗಮದ ವತಿಯಿಂದ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ; ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಪರವಾನಗಿ ಪಡೆದು ಸೌಲಭ್ಯ ಕಲ್ಪಿಸಿರುವ ಮಾರ್ಗಗಳ ವೇಳಾಪಟ್ಟಿಯನ್ನು ನೀಡುವುದು.

ಇ) ನಿಗಮದಿಂದ ನಿಗದಿಪಡಿಸಿರುವ ಮಾರ್ಗಗಳಲ್ಲಿ ಹಾಗೂ ವೇಳೆಯಲ್ಲಿ ನಿಗಮದ ಬಸ್ಸುಗಳು ಸಂಚರಿಸದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ನಿಗಮದ ಬಸ್ಸುಗಳು ನಿಗದಿತ ವೇಳೆಗೆ ಹಾಗೂ ಮಾರ್ಗದಲ್ಲಿ ಸಂಚರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಒಟ್ಟು 339 ಹಳ್ಳಿಗಳಿದ್ದು, ಅವುಗಳ ಈ ಪೈಕಿ 157 ಹಳ್ಳಿಗಳು ರಾಷ್ಟ್ರೀಕೃತ ವಲಯದಲ್ಲಿ ಹಾಗೂ 182 ಹಳ್ಳಿಗಳು ರಾಷ್ಟ್ರೀಕೃತವಲ್ಲದ ವಲಯದಲ್ಲಿ ಇರುತ್ತವೆ. ರಾಷ್ಟ್ರೀಕೃತ ವಲಯದಲ್ಲಿ ಬರುವ ಎಲ್ಲಾ 157 ಹಳ್ಳಿಗಳಿಗೂ ನಿಗಮದವತಿಯಿಂದ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ರಾಷ್ಟ್ರೀಕೃತವಲ್ಲದ ವಲಯದಲ್ಲಿ ಬರುವ 182 ಹಳ್ಳಿಗಳ ಪೈಕಿ 165 ಹಳ್ಳಿಗಳಿಗೆ ನಿಗಮದವತಿಯಿಂದ ಪ್ರಸ್ತುತ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿದ್ದು, ಯೋಗ್ಯ ರಸ್ತೆ ಇಲ್ಲದ ಕಾರಣ 17 ಹಳ್ಳಿಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುವುದಿಲ್ಲ.

ಈ ಸಾರಿಗೆ ಸೌಲಭ್ಯವನ್ನು ಚಿಂತಾಮಣಿ ತಾಲ್ಲೂಕಿನ ವಿದ್ಯಾರ್ಥಿಗಳು, ನೌಕರರು, ರೈತರ ಸಹಿತವಾಗಿ ಎಲ್ಲಾ ಸಾರ್ವಜನಿಕ ಪ್ರಯಾಣಿಕರು ಪಡೆಯುತ್ತಿದ್ದಾರೆ.

ಆ) ಚಿಂತಾಮಣಿ–ಚೇಳೂರು ಮಾರ್ಗದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಒಟ್ಟು 4 ಪರವಾನಿಗೆಗಳನ್ನು ಪಡೆದು ಸಾರಿಗೆ ಕಾರ್ಯಾಚರಣೆ ಮಾಡಲಾಗುತ್ತಿದ್ದು, ವೇಳಾ ಪಟ್ಟಿ ಈ ಕೆಳಕಂಡಂತಿದೆ.

ಅ. ಸೂ. ಸಂಖ್ಯೆ	ಮಾರ್ಗ	ಚಿಂತಾಮಣಿ ಬಿಡುವ ಸಮಯ	ಚೇಳೂರು ಬಿಡುವ ಸಮಯ
10	ಚಿಂತಾಮಣಿ–ಚೇಳೂರು	13.30	6.00
		17.30	9.45
		19.45	15.30
49	ಚಿಂತಾಮಣಿ–ಚೇಳೂರು	7.00	8.15
		13.45	15.00
		16.30	18.00
75	ಚಿಂತಾಮಣಿ–ಚೇಳೂರು	8.15	5.30
		14.15	11.00
		19.45	16.45
23	ಚಿಂತಾಮಣಿ–ಚೇಳೂರು	18.30	7.15
	ಒಟ್ಟು	**10**	**10**

ಇ) ಚಿಂತಾಮಣಿ ಬಸ್ ನಿಲ್ದಾಣದಿಂದ ಪ್ರಮುಖ ಸ್ಥಳಗಳಾದ ಬೆಂಗಳೂರು, ಕೋಲಾರ, ಮದನಪಲ್ಲಿ, ಚೇಳೂರು, ಚಿಕ್ಕಬಳ್ಳಾಪುರ, ಗೌನಿಪಲ್ಲಿ, ಪೆದ್ದೂರಿಗೆ ಬಹುತೇಕ ಸಾರಿಗೆ ಕಾರ್ಯಾಚರಣೆಯಲ್ಲಿರುತ್ತವೆ. ಇವುಗಳಲ್ಲಿ ವೇಗದೂತ ಸಾರಿಗೆಗಳ

ನಿಯಮಿತತೆಯು ಶೇ.90.1 ಇದ್ದು, ಸಾಮಾನ್ಯ ಸಾರಿಗೆಗಳ ನಿಯಮಿತತೆಯು ಶೇ.98.0 ಇರುತ್ತದೆ. ಕೆಲವೊಮ್ಮೆ ಅನಿವಾರ್ಯ ಕಾರಣಗಳಿಂದ ಸಾರಿಗೆಗಳು ತಡವಾಗಿರುತ್ತದೆ/ರದ್ದತಿಯಾಗಿರುತ್ತವೆ.

ಈ) ಚಿಕ್ಕಬಳ್ಳಾಪುರ ವಿಭಾಗದ ಚಿಂತಾಮಣಿ ಘಟಕದ ವತಿಯಿಂದ ಕಾರ್ಯಾಚರಣೆಯಾಗುತ್ತಿರುವ ಎಲ್ಲಾ ಅನುಸೂಚಿಗಳಿಗೆ ನಿಗದಿತ ವಾಹನ ಮತ್ತು ಚಾಲನಾ ಸಿಬ್ಬಂದಿಗಳನ್ನು ನಿಯೋಜಿಸಿದ್ದು, ನಿರ್ದಿಷ್ಟ ಸಮಯಕ್ಕೆ ಹಾಗೂ ವ್ಯವಸ್ಥಿತವಾಗಿ ಕಾರ್ಯಾಚರಣೆ ಮಾಡಲು ಕ್ರಮವಹಿಸಲಾಗಿದೆ.

ಜೆನರಿಕ್ ಔಷಧಿ ಮಳಿಗೆ ಸ್ಥಾಪಿಸುವುದು

2815 (3226), ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಂತಾಮಣಿ ಕ್ಷೇತ್ರದ ನಗರದಲ್ಲಿರುವ ಸಾರ್ವಜನಿಕ ಆಸ್ಪತ್ರೆಯಲ್ಲಿ ಜೆನರಿಕ್ ಔಷಧಿ ಮಳಿಗೆ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಜೆನರಿಕ್ ಔಷಧಿ ಮಳಿಗೆಯನ್ನು ಯಾವ ಕಾಲ ಮಿತಿಯಳಗೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು; (ವಿವರ ನೀಡುವುದು)?

ಶ್ರೀ ಯು.ಟಿ.ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮತ್ತು ಆ) ಚಿಂತಾಮಣಿ ಸೇರಿದಂತೆ ಇಲಾಖೆಯಿಂದ ಪ್ರತಿ ಜಿಲ್ಲೆಯ ಪ್ರತಿ ತಾಲ್ಲೂಕಿಗೊಂದರಂತೆ ಜನರಿಕ್ ಔಷಧಿ ಮಳಿಗೆ ಸ್ಥಾಪಿಸಲು ಉದ್ದೇಶಿಸಲಾಗಿದೆ. ಆದರೆ ಪ್ರಥಮ ಹಂತದಲ್ಲಿ ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.